ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಕುವೆಂಪು ವಿಶ್ವವಿದ್ಯಾಲಯ

# ಸರ್ಕಾರಿ ಪ್ರಥಮದರ್ಜೆ ಕಾಲೇಜು

ಹಾಗೂ

# ಸ್ನಾತಕೋತ್ತರ ಅಧ್ಯಯನ ಕೇಂದ್ರ

ಶಿವಮೊಗ್ಗ ಜಿಲ್ಲೆ ಕರ್ನಾಟಕ ರಾಜ್ಯ

## ಶಿಕಾರಿಪುರ–577427

(ನ್ಯಾಕ್ ಬಿ$^{++}$ ಮಾನ್ಯತೆ ಪಡೆದಿದೆ)

ದೂ. ಸಂ: 08187–222217

gfgc_skp@yahoo.in

https://gfgc.kar.nic.in/shikaripura

# ಮಾಹಿತಿ ಕೈಪಿಡಿ 2022–23



ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಕುವೆಂಪು ವಿಶ್ವವಿದ್ಯಾಲಯ

# ಸರ್ಕಾರಿ ಪ್ರಥಮದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ – 577427, ಕರ್ನಾಟಕ ರಾಜ್ಯ

(ನ್ಯಾಕ್ 'ಬಿ' ++ ಮಾನ್ಯತೆ ಪಡೆದಿದೆ ಹಾಗೂ ರೂಸಾ

ಯೋಜನೆಯ ಅಡಿಯಲ್ಲಿ ಆಯ್ಕೆಯಾಗಿದೆ)

**PROSPECTUS**

**ಮಾಹಿತಿ ಕೈಪಿಡಿ**

**2022–23**

# GOVT. FIRST GRADE COLLEGE AND POST GRADUATE CENTER

Shikaripura – 577427, Shivamogga District

(NAAC B++ Grade With CGPA 2.92

and Selected Under RUSA Plan )

gfgc_skp@yahoo.in

https://gfgc.kar.nic.in/shikaripura

# ನಮ್ಮ ಕಾಲೇಜು

ಸಹ್ಯಾದ್ರಿ ತಪ್ಪಲಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಅತ್ತ ಸಂಪೂರ್ಣ ಮಲೆನಾಡು ಅಲ್ಲ, ಬಯಲು ಸೀಮೆಯೂ ಅಲ್ಲ. ಇಂತಹ ಅರೆಮಲೆನಾಡಿನಲ್ಲಿ ಕಲಕಲನೆ ಹರಿವ ಕುಮುದ್ವತಿ ನದಿಯ ಬಲದಂಡೆಯ ಮೇಲಿರುವ ಶಿಕಾರಿಪುರವು, ನಾಡಿನ ಕಲೆ, ಸಂಸ್ಕೃತಿ, ಇತಿಹಾಸ, ಪುರಾಣ ಪ್ರಸಿದ್ಧ ಸಾಂಸ್ಕೃತಿಕ ಶ್ರೀಮಂತಿಕೆಯದು. ಇಂತಹ ಸಾಂಸ್ಕೃತಿಕ ಸಮೃದ್ಧಿಯುಳ್ಳ ತಾಲ್ಲೂಕಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅಕ್ಷರದ ಅರಿವಿಗೆ ನಮ್ಮ ಕರ್ನಾಟಕ ಸರ್ಕಾರವು 1980ರ ಆಗಸ್ಟ್‌ನಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜನ್ನು ಸ್ಥಾಪಿಸಿತು.

ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪನೆಗೊಂಡಿದ್ದ ಪ್ರತಿಷ್ಠಿತ ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಆರ್ಥಿಕವಾಗಿ ಸಬಲರಲ್ಲದ ಗ್ರಾಮೀಣಭಾಗದ ಮಕ್ಕಳಲ್ಲಿ ಉನ್ನತ ವ್ಯಾಸಂಗದ ಗುರಿ ಮೂಡಿಸಲು ಸರ್ಕಾರ ತೆಗೆದುಕೊಂಡ ಈ ತೀರ್ಮಾನವನ್ನು ಕಳೆದ 40 ವರ್ಷಗಳಿಂದ ಕಾಲೇಜು ಸತತವಾಗಿ ಸದೃಢವಾಗಿ ನೆರವೇರಿಸಿಕೊಂಡು ಬಂದಿದೆ.

ಹೀಗೆ ಶಿಕಾರಿಪುರದ ನೂರಾರು ಹಳ್ಳಿ ಮಕ್ಕಳಿಗೆ ಅವರ ಆಕಾಂಕ್ಷೆಗೆ ತಕ್ಕ ಹಾಗೆ ವಿದ್ಯಾಭ್ಯಾಸ ಹಾಗೂ ಸಾಂಸ್ಕೃತಿಕ ಉನ್ನತಿಗೆ ಕಾರಣವಾದ ನಮ್ಮ ಈ ಪ್ರೀತಿಯ ಮಹಾವಿದ್ಯಾಲಯವು ಶಿಕಾರಿಪುರದಿಂದ ಶಿವಮೊಗ್ಗೆಗೆ ತೆರಳುವ ರಾಜ್ಯಹೆದ್ದಾರಿಯಲ್ಲಿ ವಿಶಾಲ ಸುಸಜ್ಜಿತ ಕಟ್ಟಡವನ್ನು ಒಳಗೊಂಡು ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಕಡಿಮೆ ಇಲ್ಲದಂತೆ ಕಾರ್ಯ ನಿರ್ವಹಿಸಿಕೊಂಡು ಬರುತ್ತಿದೆ. ಸುಂದರವಾದ ಪ್ರಾಕೃತಿಕ ಪರಿಸರ, ಸುಸಜ್ಜಿತ ICT ಕೊಠಡಿಗಳು, ಅಪಾರ ಅನುಭವ, ಉನ್ನತ ವ್ಯಾಸಂಗ ಪಡೆದ ನುರಿತ ಅದ್ಯಾಪಕರು **(ಅದ್ಯಾಪಕ ವೃಂದ)** ಮತ್ತು ಸಿಬ್ಬಂದಿವರ್ಗ, ಸ್ವಂತ ಸ್ಟೇಡಿಯಂ **(ಕ್ರೀಡಾಂಗಣ)**, ವಿಜ್ಞಾನ ಪ್ರಯೋಗಾಲಯ, ವಿಶಾಲ ಆಡಿಟೋರಿಯಂ **(ಸಭಾಂಗಣ)**, ಗ್ರೀಕ್ ಮಾದರಿಯ ರಂಗಶಾಲೆ, ಒಳಾಂಗಣ ಕ್ರೀಡಾಂಗಣ, ಜಿಮ್ **(ವ್ಯಾಯಾಮ ಶಾಲೆ)**, ಸ್ವತಂತ್ರ ಕಟ್ಟಡದ ಗ್ರಂಥಾಲಯ, ಹವಾಯಂತ್ರಿತ ಕಂಪ್ಯೂಟರ್ ಲ್ಯಾಬ್ **(ಗಣಕಯಂತ್ರ ಪ್ರಯೋಗಾಲಯ)**, ಎನ್.ಸಿ.ಸಿ., ಎನ್.ಎಸ್.ಎಸ್., ರೋವರ್ಸ್ **ರೇಜರ್ಸ್**, ರೆಡ್‌ಕ್ರಾಸ್ ವಿಭಾಗಗಳು, ಮಹಿಳಾ ವಿಶ್ರಾಂತಿಗೃಹ, ಬಾಲಕರ ವಿದ್ಯಾರ್ಥಿನಿಲಯ, ಬಾಲಕಿಯರ ವಿದ್ಯಾರ್ಥಿನಿಲಯ (ನಿರ್ಮಾಣ ಹಂತದಲ್ಲಿದೆ) ಮುಂತಾದ ಅನೇಕ

ಸೌಲಭ್ಯಗಳನ್ನು ಈ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಪಡೆಯ ಬಹುದಾಗಿದೆ. ಇದರೊಂದಿಗೆ 2010–11 ನೆಯ ಸಾಲಿನಿಂದ ಕನ್ನಡ ಹಾಗೂ ಅರ್ಥಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಸಹ ಕಾರ್ಯನಿರ್ವಹಿಸುತ್ತಿವೆ. ನಿರಂತರವಾಗಿ ಪದವಿ ಮತ್ತು ಸ್ನಾತಕೋತ್ತರ (ಕನ್ನಡ ಹಾಗೂ ಅರ್ಥಶಾಸ್ತ್ರ ಎಂ.ಎ) ವಿಷಯಗಳಲ್ಲಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಮಟ್ಟದಲ್ಲಿ ರ್‍ಯಾಂಕ್ **(ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಿದ್ದಾರೆ)** ಪಡೆಯುತ್ತಿದ್ದಾರೆ.

ಇಂತಹ ನಮ್ಮ ಹೆಮ್ಮೆಯ ಕಾಲೇಜಿನಲ್ಲಿ, ಬಿ.ಎ., ಬಿ.ಎಸ್.ಡಬ್ಲ್ಯೂ., ಬಿ.ಕಾಂ., ಬಿ.ಬಿ.ಎ., ಬಿ.ಎಸ್ಸಿ ಮತ್ತು ಬಿ.ಸಿ.ಎ. ಎಂಬ **(ವಿಷಯಗಳಲ್ಲಿ)** ಆರು ಪದವಿಯ ಅಧ್ಯಯನಗಳಿಗೆ ಅವಕಾಶವಿದೆ. ಸರ್ಕಾರದಿಂದ ಭಾಗಶಃ ಎಲ್ಲಾ ವಿದ್ಯಾರ್ಥಿಗಳಿಗೂ ಅನೇಕ **(ವಿವಿಧ)** ಸ್ಕಾಲರ್‌ಶಿಪ್ **(ವಿದ್ಯಾರ್ಥಿ ವೇತನ)** ದೊರೆಯುವುದಲ್ಲದೆ, ಸರ್ಕಾರವು ಅನೇಕ ವಿದ್ಯಾರ್ಥಿ ನಿಲಯಗಳನ್ನೂ ತೆರೆದು ಮಕ್ಕಳ ಊಟ–ವಸತಿಯ ವ್ಯವಸ್ಥೆಯನ್ನು ಕಲ್ಪಿಸಿದೆ. ಸರ್ಕಾರದಿಂದ ದೊರೆಯುವ ಈ ಎಲ್ಲಾ ಸೌಕರ್ಯಗಳನ್ನು ಪಡೆದು ಪದವೀಧರರಾಗಿ ಕುಟುಂಬದ, ಸಮಾಜದ, ಊರಿನ, ದೇಶದ ಜವಾಬ್ದಾರಿಯುತ ಸತ್ಪ್ರಜೆಗಳಾಗಿ, ಜೀವನ, ಉದ್ಯೋಗಾವಕಾಶಗಳನ್ನು ರೂಪಿಸಿಕೊಳ್ಳಲು ನಾಡು–ನುಡಿ, ಸಂಸ್ಕೃತಿ, ಸಾಹಿತ್ಯ ಉಳಿಸಿ ಬೆಳೆಸಲು ಮತ್ತು ಮೌಲ್ಯಾಧಾರಿತ ಶಿಕ್ಷಣವನ್ನು ನೀಡಲು ನಮ್ಮ ಕಾಲೇಜು ಸದಾ ಸಿದ್ಧವಿದೆ. ಈ ನಿಟ್ಟಿನಲ್ಲಿ ಹಲವು ಕ್ರಿಯಾತ್ಮಕ ಯೋಜನೆಗಳು ಸಂವಾದ, ಪೋಷಕರ ಸಭೆ, ವಿಚಾರ ಸಂಕಿರಣ, ನಾಟಕ, ಸದಭಿರುಚಿಯ ಪ್ರದರ್ಶನ ಹೀಗೆ ಪ್ರತಿ ಶೈಕ್ಷಣಿಕ ವರ್ಷದಲ್ಲಿ ನಾವು ರೂಢಿಸಿಕೊಂಡು ಬರುತ್ತಿದ್ದೇವೆ. ಇಂತಹ ಎಲ್ಲಾ ಕೆಲಸಗಳಲ್ಲಿ ತೊಡಗಿರುವ ಈ ಮಹಾ ವಿದ್ಯಾಲಯದಲ್ಲಿ ಓದಿ ಬದುಕನ್ನು ರೂಪಿಸಿಕೊಂಡ ಹಳೆ ವಿದ್ಯಾರ್ಥಿಗಳು ಅಪಾರ ಸಂಖ್ಯೆಯಲ್ಲಿ ಸಂಘಟಿತರಾಗಿ ನಮ್ಮೊಂದಿಗೆ ಕೈಜೋಡಿಸುತ್ತಿದ್ದಾರೆ. ಈ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆಯಲು ಆಗಮಿಸುತ್ತಿರುವ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಕಾಲೇಜಿನ ಪರವಾಗಿ ತುಂಬು ಹೃದಯದ ಸ್ವಾಗತ ಕೋರುತ್ತೇನೆ.

**ಡಾ. ಶೇಖರ್, ಪ್ರಾಂಶುಪಾಲರು**
**ಬೋಧಕ ಹಾಗೂ ಬೋಧಕೇತರ ವರ್ಗ**

# ಹೊಸ ಶಿಕ್ಷಣ ನೀತಿ 2021–22

ಹೊಸ ಶಿಕ್ಷಣ ನೀತಿಯು ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ ಒಂದು ನೀತಿಯಾಗಿದ್ದು, ಅದನ್ನು ಕರ್ನಾಟಕ ಸರ್ಕಾರ ದೇಶದಲ್ಲೇ ಪ್ರಥಮವಾಗಿ 2021–22ನೇ ಸಾಲಿನಿಂದ ಜಾರಿಗೆ ತಂದಿದೆ.

## ಈ ನೀತಿಯ ದೂರದರ್ಶಿತ್ವ

ಭಾರತದೇಶವನ್ನು ಸುಸ್ಥಿರವಾಗಿ ಸಮಾನತಾ ಮನೋಧರ್ಮದ ಹಾಗೂ ಸ್ಪಂದನಶೀಲ ಜ್ಞಾನಸಮಾಜವಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಭಾರತೀಯ ಅಸ್ಮಿತೆಯ ಮೇಲೆ ಆಧಾರಗೊಂಡಿರುವ ಶಿಕ್ಷಣ ವ್ಯವಸ್ಥೆಯೊಂದನ್ನು ಸಾಕಾರಗೊಳಿಸುವುದು ಈ ರಾಷ್ಟ್ರೀಯ ಶಿಕ್ಷಣ ನೀತಿಯ ಮಹಾನ್ ಉದ್ದೇಶವಾಗಿದೆ. ಪ್ರತಿಯೊಬ್ಬರಿಗೂ ಉನ್ನತ ಮಟ್ಟದ ಶಿಕ್ಷಣ ದೊರಕಿಸಿಕೊಡುವುದರ ಮೂಲಕ ಭಾರತವನ್ನು ಜ್ಞಾನ ದಿಗಂತದ ಒಂದು ಮಹಾನ್ ಶಕ್ತಿಯಾಗಿ ಪರಿವರ್ತಿಸುವ ಮೂಲಕ ಈ ಕನಸನ್ನು ನನಸಾಗಿಸಬಹುದು. ಈ ದಿಶೆಯಲ್ಲಿ ನಮ್ಮ ಸಂಸ್ಥೆಗಳ ಶಿಕ್ಷಣಕ್ರಮ ಮತ್ತು ಬೋಧನಕ್ರಮಗಳು ವಿದ್ಯಾರ್ಥಿಗಳಲ್ಲಿ ಮೂಲಭೂತ ಕರ್ತವ್ಯಗಳು ಮತ್ತು ಸಂವಿಧಾನಾತ್ಮಕ ಮೌಲ್ಯಗಳು ಇವುಗಳ ಬಗೆಗೆ ಆಳವಾದ ಗೌರವಾದರಗಳನ್ನು ಹುಟ್ಟುಹಾಕುವಂತಾಗಬೇಕೆಂಬ ಗುರಿಯನ್ನು ಈ ಶಿಕ್ಷಣ ನೀತಿ ಹೊಂದಿದೆ. ಬದಲಾಗುತ್ತಿರುವ ಪ್ರಪಂಚದಲ್ಲಿ ರಾಷ್ಟ್ರವ್ಯಾಪಿಯಾಗಿ ಬೆಸುಗೆಗೊಂಡು ವಿದ್ಯಾರ್ಥಿಗಳು ತಮ್ಮ ಪಾತ್ರದ ಹಾಗೂ ಜವಾಬ್ದಾರಿಗಳ ವಿಚಾರವಾಗಿ ಪ್ರಜ್ಞಾಪೂರ್ವಕವಾದ ಅರಿವನ್ನು ಪಡೆದುಕೊಂಡಿರಬೇಕೆಂಬುದು ಪ್ರಸಕ್ತ ನೀತಿಯ ಆಶಯವಾಗಿದೆ. ಈ ನೀತಿಯ ದೂರದರ್ಶಿತ್ವದ ಇನ್ನೊಂದು ಅಂಶವೆಂದರೆ ಇದು ಕೇವಲ ಆಲೋಚನೆಯಲ್ಲಿ ಮಾತ್ರವಲ್ಲದೆ ಭಾವ, ಬುದ್ಧಿ ಹಾಗೂ ಕ್ರಿಯೆಗಳಲ್ಲಿ ನಾವು ಭಾರತೀಯರು ಎಂಬ ಆಳವಾದ ಹೆಮ್ಮೆಯ ಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಲ್ಲದೆ ಅವರಲ್ಲಿ ನಿಜವಾಗಿಯೂ ಜಾಗತಿಕ ಪ್ರಜೆಗೆ ಅಗತ್ಯವಾದ ಜ್ಞಾನ, ಕೌಶಲ್ಯಗಳು, ಮೌಲ್ಯಗಳು ಹಾಗೂ

ನಿಲುವುಗಳನ್ನು ರೂಢಿಸಬೇಕಾಗಿದೆ. ಈ ನಿಲುವುಗಳು ಮಾನವ ಹಕ್ಕುಗಳು, ಸುಸ್ಥಿರ ಬೆಳವಣಿಗೆ ಮತ್ತು ಬದುಕು ಹಾಗೂ ವಿಶ್ವಕಲ್ಯಾಣ ಇವುಗಳಿಗೆ ನಾಂದಿಹಾಡುವ ಮೂಲಕ ವಿಶ್ವಪ್ರಜೆಯ ವರ್ಚಸ್ಸನ್ನು ಮೂಡಿಸಬೇಕಾಗಿದೆ.

ಈ ರೀತಿಯ ಮಹೋನ್ನತವಾದ ಉದ್ದೇಶದೊಂದಿಗೆ ಕರ್ನಾಟಕ ಸರ್ಕಾರ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದು, ಇದರ ಸದುಪಯೋಗವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಳ್ಳಲು ಅನುಕೂಲವಾಗುವಂತೆ ನಮ್ಮ ಕಾಲೇಜಿನಲ್ಲಿಯೂ ಈ ವರ್ಷದಿಂದ ನೂತನ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲಾಗಿದೆ.

## ಕಾಲೇಜಿನಲ್ಲಿ ಲಭ್ಯವಿರುವ ಪದವಿಗಳು ಮತ್ತು ವಿಷಯಗಳು

**ಬಿ.ಎ ಪದವಿ**

1. **ಇತಿಹಾಸ**
2. **ಅರ್ಥಶಾಸ್ತ್ರ**
3. **ರಾಜ್ಯಶಾಸ್ತ್ರ**
4. **ಸಮಾಜಶಾಸ್ತ್ರ**
5. **ಕನ್ನಡ ಐಚ್ಛಿಕ**
6. **ಇಂಗ್ಲೀಷ್ ಐಚ್ಛಿಕ**

**ಬಿ.ಎಸ್ಸಿ ಪದವಿ**

1. **ಭೌತಶಾಸ್ತ್ರ**
2. **ರಸಾಯನಶಾಸ್ತ್ರ**
3. **ಗಣಿತಶಾಸ್ತ್ರ**
4. **ವಿದ್ಯುನ್ಮಾನಶಾಸ್ತ್ರ**
5. **ಗಣಕವಿಜ್ಞಾನ**

ಈ ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಮೇಜರ್ ವಿಷಯವಾಗಿ ಆಯ್ಕೆ ಮಾಡಿಕೊಳ್ಳಬಹುದು.

ಬಿ.ಎ. ಪದವಿ ಓದುವವರು ಬಿ.ಎಸ್ಸಿ, ಬಿಕಾಂ, ಬಿ.ಬಿ.ಎ, ಅಥವಾ ಬಿ.ಸಿ.ಎ ಪದವಿಯಲ್ಲಿನ ಮುಕ್ತ ಆಯ್ಕೆ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಓದಬೇಕು

ಹಾಗೆಯೇ ಬಿ.ಎಸ್ಸಿ ಮತ್ತು ಬಿ.ಸಿ.ಎ ಪದವಿ ಓದುವ ವಿದ್ಯಾರ್ಥಿಗಳು ಬಿ.ಎ, ಬಿ.ಕಾಂ, ಬಿ.ಬಿ.ಎ, ಬಿ.ಎಸ್.ಡಬ್ಲ್ಯೂ ಪದವಿಯಲ್ಲಿನ ಮುಕ್ತ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಓದಬೇಕು

**ಬಿ.ಕಾಂ**

ಕಡ್ಡಾಯ ವಿಷಯಗಳು ಮತ್ತು ಬಿ.ಎ, ಬಿ.ಎಸ್,ಡಬ್ಲ್ಯೂ, ಬಿ.ಎಸ್ಸಿ ಅಥವಾ ಬಿ.ಸಿ.ಎ ಪದವಿಯ ಮುಕ್ತ ಆಯ್ಕೆ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಓದಬೇಕು.

## ಬಿ.ಬಿ.ಎ

ಕಡ್ಡಾಯ ವಿಷಯಗಳು ಮತ್ತು ಬಿ.ಎ, ಬಿ.ಎಸ್, ಡಬ್ಲ್ಯೂ, ಬಿ.ಎಸ್ಸಿ ಮತ್ತು ಬಿ.ಸಿ.ಎ ಪದವಿಯ ಮುಕ್ತ ಆಯ್ಕೆ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಓದಬೇಕು.

## ಬಿ.ಸಿ.ಎ

ಕಡ್ಡಾಯ ವಿಷಯಗಳು ಮತ್ತು ಬಿ.ಎ, ಬಿ.ಎಸ್,ಡಬ್ಲ್ಯೂ, ಬಿ.ಕಾಂ ಮತ್ತು ಬಿ.ಬಿ.ಎ ಪದವಿಯ ಮುಕ್ತ ಆಯ್ಕೆ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಓದಬೇಕು.

## ಬಿ.ಎಸ್.ಡಬ್ಲ್ಯೂ

ಕಡ್ಡಾಯ ವಿಷಯಗಳು ಮತ್ತು ಬಿ.ಎಸ್ಸಿ, ಬಿಕಾಂ, ಬಿ.ಬಿ.ಎ, ಅಥವಾ ಬಿ.ಸಿ.ಎ ಪದವಿಯಲ್ಲಿನ ಮುಕ್ತ ಆಯ್ಕೆ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಓದಬೇಕು.

## ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿಸಿಎ, ಬಿಬಿಎ, ಬಿಎಸ್‌ಡಬ್ಲ್ಯೂ ಎಲ್ಲಾ ಪ್ರೋಗ್ರಾಂಗಳಲ್ಲೂ ಭಾಷೆಯ ಆಯ್ಕೆ:

1. ಕನ್ನಡ
2. ಇಂಗ್ಲೀಷ್
3. ಸಂಸ್ಕೃತ
4. ಉರ್ದು
5. ಹಿಂದಿ

ಈ ಭಾಷೆಗಳಲ್ಲಿ ಯಾವುದಾದರೂ ಎರಡನ್ನು ಆಯ್ಕೆ ಮಾಡಿಕೊಳ್ಳಬಹುದು.

## ಸ್ನಾತಕೋತ್ತರ ವಿಭಾಗ :
## (ಎಂ.ಎ. ಕನ್ನಡ ಮತ್ತು ಅರ್ಥಶಾಸ್ತ್ರ)

ಎಂ.ಎ., ಕನ್ನಡ ಹಾಗೂ ಎಂ.ಎ., ಅರ್ಥಶಾಸ್ತ್ರ ವಿಷಯಗಳಲ್ಲಿ ಸ್ನಾತಕೋತ್ತರ ಅಧ್ಯಯನಕ್ಕೆ ಅವಕಾಶವಿದ್ದು ಒಂದೊಂದು ವಿಭಾಗದಲ್ಲಿ 20 ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವಿರುತ್ತದೆ.

# ಕಾಲೇಜು ಬೋಧಕ ವರ್ಗ

**ಡಾ. ಶೇಖರ್,** ಪ್ರಾಂಶುಪಾಲರು

## ಕನ್ನಡ ವಿಭಾಗ (ಸ್ನಾತಕ ಮತ್ತು ಸ್ನಾತಕೋತ್ತರ)

| | |
|---|---|
| **ವಿನಯ ಆರ್.ಕೆ.** | ಮುಖ್ಯಸ್ಥರು, ಕನ್ನಡ ವಿಭಾಗ |
| **ಡಾ. ತಿಮ್ಮಪ್ಪ ಎ.ಕೆ.** | ಸಂಯೋಜಕರು, ಸ್ನಾತಕೋತ್ತರ ವಿಭಾಗ |
| **ಡಾ. ಎ.ಬಿ. ಉಮೇಶ.** | ಸಹ ಪ್ರಾಧ್ಯಾಪಕರು |
| **ಡಾ. ರೂಪ ಜಿ.ಕೆ.** | ಸಹಾಯಕ ಪ್ರಾಧ್ಯಾಪಕರು |
| **ನರಸೇಗೌಡ ಕೆ.** | ಸಹಾಯಕ ಪ್ರಾಧ್ಯಾಪಕರು |

## ಇಂಗ್ಲೀಷ್ ವಿಭಾಗ

| | |
|---|---|
| **ಕೃಷ್ಣಪ್ಪ ಬಡಿಗೇರ.** | ಮುಖ್ಯಸ್ಥರು, ಇಂಗ್ಲೀಷ್ ವಿಭಾಗ |
| **ಶಿವರುದ್ರಪ್ಪ ಡಿ.** | ಸಹಾಯಕ ಪ್ರಾಧ್ಯಾಪಕರು |
| **ಸೌಮ್ಯ ಬಿ.ವಿ.** | ಸಹಾಯಕ ಪ್ರಾಧ್ಯಾಪಕರು |

## ಇತಿಹಾಸ ವಿಭಾಗ

| | |
|---|---|
| **ಸುಮ ಎಸ್.** | ಮುಖ್ಯಸ್ಥರು, ಇತಿಹಾಸ ವಿಭಾಗ |
| **ಶಕುಂತಲ ಬಿ.ಹೆಚ್.** | ಸಹಾಯಕ ಪ್ರಾಧ್ಯಾಪಕರು |
| **ವೆಂಕಟೇಶ್ ಆರ್.** | ಸಹಾಯಕ ಪ್ರಾಧ್ಯಾಪಕರು |

## ಅರ್ಥಶಾಸ್ತ್ರ ವಿಭಾಗ

| | |
|---|---|
| **ಡಾ. ಅಶ್ವಿನಿ ಹೆಚ್. ಬಿದರಳ್ಳಿ.** | ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ |
| **ಡಾ. ಹನುಮಂತಪ್ಪ.** | ಸಂಯೋಜಕರು , ಸ್ನಾತಕೋತ್ತರ ವಿಭಾಗ |
| **ಡಾ. ನೇತ್ರಾವತಿ.** | ಸಹಾಯಕ ಪ್ರಾಧ್ಯಾಪಕರು |

## ಸಮಾಜಶಾಸ್ತ್ರ ವಿಭಾಗ

| | |
|---|---|
| **ಡಾ. ಮಂಜುಳ** | ಮುಖ್ಯಸ್ಥರು , ಸಮಾಜಶಾಸ್ತ್ರ ವಿಭಾಗ |
| **ಡಾ. ಶೇಖರ** | ಪ್ರಾಂಶುಪಾಲರು ಮತ್ತು ಸಹ ಪ್ರಾಧ್ಯಾಪಕರು |

## ರಾಜ್ಯಶಾಸ್ತ್ರ ವಿಭಾಗ

| | |
|---|---|
| **ನಾಗೇಂದ್ರಪ್ಪ ಕೆ.ಟಿ.** | ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ |
| **ಮಲ್ಲಿಕಾರ್ಜುನ.** | ಸಹಾಯಕ ಪ್ರಾಧ್ಯಾಪಕರು |

## ವಾಣಿಜ್ಯಶಾಸ್ತ್ರ ವಿಭಾಗ

| | |
|---|---|
| **ಡಾ.ಜೋಷಿ ಜಿ.ಆರ್.** | ಮುಖ್ಯಸ್ಥರು, ವಾಣಿಜ್ಯಶಾಸ್ತ್ರ ವಿಭಾಗ |
| **ರೋಹಿಣಿ ಆರ್.** | ಸಹಾಯಕ ಪ್ರಾಧ್ಯಾಪಕರು |

## ನಿರ್ವಹಣಾಶಾಸ್ತ್ರ ವಿಭಾಗ

| | |
|---|---|
| **ಮಂಜುನಾಥ ಎನ್.ಎಸ್.** | ಮುಖ್ಯಸ್ಥರು, ನಿರ್ವಹಣಾಶಾಸ್ತ್ರ ವಿಭಾಗ |

## ಭೌತಶಾಸ್ತ್ರ ವಿಭಾಗ

| | |
|---|---|
| **ಮಹ್ಮದ್ ಅಜ್ಮಲ್.** | ಮುಖ್ಯಸ್ಥರು, ಭೌತಶಾಸ್ತ್ರ ವಿಭಾಗ |
| **ಜಗದೀಶ ಪಿ.** | ಸಹಾಯಕ ಪ್ರಾಧ್ಯಾಪಕರು |

## ಗಣಿತಶಾಸ್ತ್ರ ವಿಭಾಗ

| | |
|---|---|
| **ಸುವರ್ಣ ಎಸ್ ಮಲಘಾಣ.** | ಮುಖ್ಯಸ್ಥರು , ಗಣಿತಶಾಸ್ತ್ರ ವಿಭಾಗ |

## ರಸಾಯನಶಾಸ್ತ್ರ ವಿಭಾಗ

| | |
|---|---|
| **ಡಾ.ರಮೇಶ್ ಡಿ.ಆರ್.** | ಮುಖ್ಯಸ್ಥರು, ರಸಾಯನಶಾಸ್ತ್ರ ವಿಭಾಗ |
| **ಚಿದಾನಂದ್ ಎನ್.ವೈ.** | ಸಹ ಪ್ರಾಧ್ಯಾಪಕರು |

## ಗಣಕವಿಜ್ಞಾನ ವಿಭಾಗ

| | |
|---|---|
| **ಸರಿತ ಎನ್.** | ಮುಖ್ಯಸ್ಥರು, ಗಣಕವಿಜ್ಞಾನ ವಿಭಾಗ |
| **ಶೀಲಾ ಎನ್.ಎಸ್** | ಸಹಾಯಕ ಪ್ರಾಧ್ಯಾಪಕರು |
| **ಗೋಪಾಲ ಬಿ.** | ಸಹಾಯಕ ಪ್ರಾಧ್ಯಾಪಕರು |

## ಸಮಾಜಕಾರ್ಯ ವಿಭಾಗ

**ಡಾ. ಪಟ್ಟಣ ರಾಕೇಶ.** ಮುಖ್ಯಸ್ಥರು, ಸಮಾಜಕಾರ್ಯ ವಿಭಾಗ

**ಡಾ. ಅಜಯಕುಮಾರ್ ಸಿ.ಹೆಚ್.** ಸಹಾಯಕ ಪ್ರಾಧ್ಯಾಪಕರು

**ಡಾ. ಪಾಂಡುರಂಗ ಬಿ.** ಸಹಾಯಕ ಪ್ರಾಧ್ಯಾಪಕರು

## ವಿದ್ಯುನ್ಮಾನಶಾಸ್ತ್ರ ವಿಭಾಗ

**ಎ. ನಾಗರಾಜ.** ಮುಖ್ಯಸ್ಥರು, ವಿದ್ಯುನ್ಮಾನಶಾಸ್ತ್ರ ವಿಭಾಗ

## ದೈಹಿಕ ಶಿಕ್ಷಣ ವಿಭಾಗ

**ಡಾ. ಅನಿಲ್‌ಕುಮಾರ್ ಎ.ಬಿ.** ದೈಹಿಕ ಶಿಕ್ಷಣ ಬೋಧಕರು

## ಗ್ರಂಥಾಲಯ ವಿಭಾಗ

**ಅರುಳ್‌ಕುಮಾರ.** ಗ್ರಂಥಪಾಲಕರು

## ಬೋಧಕೇತರರು

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1. | ವೀರನಗೌಡ .ಜಿ | ಪತ್ರಾಂಕಿತ ವ್ಯವಸ್ಥಾಪಕರು |
| 2. | ರಾಜೇಶ್ವರಿ ಸಿದ್ದನಗೌಡ್ರು | ಪ್ರ.ದ.ಸ |
| 3. | ಪಂಚಾಕ್ಷರಯ್ಯ | ದ್ವಿ.ದ.ಸ |
| 4. | ಇಂದಿರಮ್ಮ | ಅಟೆಂಡರ್ |
| 5. | ಹಾಲೇಶ್ .ಬಿ | ಪರಿಚಾರಕರು |
| 6. | ವಿನೋದಕುಮಾರ ಎ | ಪರಿಚಾರಕರು |
| 7. | ಚೇತನಕುಮಾರ ಬಿ.ವೈ | ಪರಿಚಾರಕರು |

# ಕಾಲೇಜು ಅಭಿವೃದ್ಧಿ ಸಮಿತಿಯ ವಿವರ

## ಅಧ್ಯಕ್ಷರು

**ಸನ್ಮಾನ್ಯ ಶ್ರೀ. ಬಿ.ಎಸ್. ಯಡಿಯೂರಪ್ಪನವರು**
ಮಾನ್ಯ ಶಾಸಕರು, ಶಿಕಾರಿಪುರ ವಿಧಾನ ಸಭಾ ಕ್ಷೇತ್ರ ಮತ್ತು
ನಿಕಟಪೂರ್ವ ಮುಖ್ಯ ಮಂತ್ರಿಗಳು ಕರ್ನಾಟಕ ಸರ್ಕಾರ

## ಸದಸ್ಯರು

1. ಶ್ರೀ. ಹೆಚ್ ಆರ್. ಮಂಜುನಾಥ
2 ಶ್ರೀ. ಎಂ.ಬಿ. ಶಿವಕುಮಾರ್
3. ಶ್ರೀ. ಚಂದ್ರಪ್ಪ ಮೇಷ್ಟ್ರು
4. ಶ್ರೀಮತಿ. ರತ್ನಾ ಜಯಣ್ಣ
5. ಶ್ರೀ. ಮಲ್ಲಪ್ಪ ಹುಲುಗಾವಲು
6. ಶ್ರೀ. ಎಸ್.ಜಿ. ಜಯಪ್ಪ
7. ಶ್ರೀ. ಕೆ.ಎಸ್. ಜಗದೀಶ್
8. ಶ್ರೀ. ಬಿ. ಮಂಜುನಾಥ
9. ಶ್ರೀ. ಗುರುರಾಜ್ ಜಗತಾಪ್
10. ಶ್ರೀ. ಹೆಚ್.ಎಸ್. ಬಾಲಚಂದ್ರ

## ಹಿರಿಯ ವಿದ್ಯಾರ್ಥಿಗಳ ಸಂಘ – ಕಾರ್ಯಕಾರಿ ಸಮಿತಿ

**ಪ್ರಾಂಶುಪಾಲರು** ಗೌರವಾಧ್ಯಕ್ಷರು
**ಬಿ.ಸಿ. ವೇಣುಗೋಪಾಲ್** ಅಧ್ಯಕ್ಷರು
**ಸ.ನಾ. ಮಂಜಪ್ಪ** ಉಪಾಧ್ಯಕ್ಷರು
**ಬಿ.ಎಂ. ರೇವಣಪ್ಪ** ಉಪಾಧ್ಯಕ್ಷರು
**ದೊಡ್ಡಪ್ಪ. ಪಿ.** ಪ್ರಧಾನ ಕಾರ್ಯದರ್ಶಿ
**ಹೆಚ್.ಆರ್.ರಾಘವೇಂದ್ರ** ಕಾರ್ಯದರ್ಶಿ
**ದೇವರಾಜು.ಎಸ್.ಆರ್.** ಖಜಾಂಚಿ
**ಜಗದೀಶ್.ಕೆ.ಎಂ.** ಸಂಘಟನಾ ಕಾರ್ಯದರ್ಶಿ
**ಸಕಲೇಶ್.ಹೆಚ್.ಜಿ.** ನಿರ್ದೇಶಕರು
**ಸೋಮಶೇಖರ್ ಶಿಮೊಗ್ಗಿ** ನಿರ್ದೇಶಕರು
**ಎಸ್. ರಘುಕುಮಾರ್** ನಿರ್ದೇಶಕರು
**ಕೃಷ್ಣೋಜಿರಾವ್** ನಿರ್ದೇಶಕರು
**ಮಾರುತಿ .ಆರ್** ನಿರ್ದೇಶಕರು
**ರಾಜು .ಬಿ.ಎಲ್.** ನಿರ್ದೇಶಕರು
**ರಘು .ಎಂ.ಆರ್.** ನಿರ್ದೇಶಕರು

## ಪದವಿ ಶಿಕ್ಷಣ ಪ್ರವೇಶಕ್ಕೆ ಅರ್ಹತೆ

**ಬಿ.ಎ., ಬಿ.ಎಸ್.ಡಬ್ಲ್ಯೂ., ಬಿ.ಕಾಂ., ಬಿ.ಬಿ.ಎ., ಬಿ.ಎಸ್ಸಿ., ಬಿ.ಸಿ.ಎ**

ಪದವಿ ಶಿಕ್ಷಣದಲ್ಲಿ ಸೆಮಿಸ್ಟರ್ ಪದ್ಧತಿಯನ್ನು ಜಾರಿಗೊಳಿಸಲಾಗಿದೆ. ಪ್ರತಿ ಶೈಕ್ಷಣಿಕ ವರ್ಷವು ಎರಡು ಸೆಮಿಸ್ಟರ್‌ಗಳನ್ನು ಒಳಗೊಂಡಿದೆ.

1) ಕರ್ನಾಟಕ ರಾಜ್ಯದ ಪದವಿಪೂರ್ವ ಶಿಕ್ಷಣ ಮಂಡಳಿಯಿಂದ ಎರಡು ವರ್ಷಗಳ ಪಿ.ಯು.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಥವಾ ಸರ್ಕಾರದಿಂದ ಅಂಗೀಕೃತವಾದ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

2) ಬೇರೆ ವಿಶ್ವವಿದ್ಯಾಲಯಗಳಲ್ಲಿ ಓದಿದ ವಿದ್ಯಾರ್ಥಿಗಳು ಪ್ರವೇಶ ಬಯಸಿದರೆ ಅಂತಹ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದ ಅನುಮತಿ ಪತ್ರ ತಂದರೆ ಪ್ರವೇಶ ಮಿತಿಗೆ ಒಳಪಟ್ಟು ಪ್ರವೇಶ ನೀಡಲಾಗುವುದು.

## ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಅರ್ಹತೆ

**ಕನ್ನಡ ಎಂ.ಎ., :–** ಬಿ.ಎ., ಕನ್ನಡ ಐಚ್ಛಿಕ ವಿಷಯದಲ್ಲಿ ಕಡ್ಡಾಯವಾಗಿ ತೇರ್ಗಡೆ ಹೊಂದಿರ ಬೇಕು.

**ಅರ್ಥಶಾಸ್ತ್ರ ಎಂ.ಎ., :–** ಬಿ.ಎ., ಅರ್ಥಶಾಸ್ತ್ರ ವಿಷಯದಲ್ಲಿ ಕಡ್ಡಾಯವಾಗಿ ತೇರ್ಗಡೆ ಹೊಂದಿರಬೇಕು.

ಸ್ನಾತಕೋತ್ತರ ಪದವಿಯು ಎರಡು ವರ್ಷಗಳ ಅವಧಿ ಹೊಂದಿದ್ದು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಎರಡು ಸೆಮಿಸ್ಟರ್‌ಗಳು ಇರುತ್ತವೆ.

ಹೊರ ವಿಶ್ವವಿದ್ಯಾಲಯಗಳಿಂದ ಪದವಿ ಪಡೆದ ವಿದ್ಯಾರ್ಥಿಗಳು ವಲಸೆ ಪ್ರಮಾಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಅನುಸರಿಸಿ ಪ್ರವೇಶ ನೀಡಲಾಗುವುದು.

**ದ್ವಿತೀಯ/ ತೃತೀಯ ಬಿ.ಎ., ಬಿ.ಎಸ್.ಡಬ್ಲೂ., ಬಿ.ಕಾಂ., ಬಿ.ಬಿ.ಎ., ಬಿ.ಎಸ್ಸಿ., ಬಿ.ಸಿ.ಎ ಪದವಿ ಪ್ರವೇಶಕ್ಕೆ ನಿಯಮಗಳು :–**

1. ಎರಡನೇ ವರ್ಷದ ಪದವಿ ಪ್ರವೇಶ ಪಡೆಯಲು ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ನಿಂದ 40% ವಿಷಯಗಳು ಪಾಸಾಗಿರಬೇಕು (ಪರಿಸರ ವಿಜ್ಞಾನ ಮತ್ತು ಭಾರತದ ಸಂವಿಧಾನ ಸೇರಿ).
2. ಮೂರನೇ ವರ್ಷದ ಪದವಿಗೆ ಪ್ರವೇಶ ಪಡೆಯಲು 4 ಸೆಮಿಸ್ಟರ್ ಪ್ರಥಮ, ದ್ವಿತೀಯ, ತೃತೀಯ ಹಾಗೂ ನಾಲ್ಕನೇ ಸೆಮಿಸ್ಟರ್‌ಗಳಿಂದ 40% ವಿಷಯಗಳು ಪಾಸಾಗಿರಬೇಕು.
3. ದ್ವಿತೀಯ / ತೃತೀಯ ಪದವಿಗೆ ಪ್ರವೇಶ ಪಡೆಯುವಾಗ ಹಿಂದಿನ ಸೆಮಿಸ್ಟರ್‌ಗಳ ಎಲ್ಲಾ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿರಬೇಕು.

   ✳ ವಿದ್ಯಾರ್ಥಿನಿಯರಿಗೆ ಸರ್ಕಾರಿ ನಿಯಮಾನುಸಾರ ಬೋಧನಾ ಶುಲ್ಕ ಹಾಗೂ ಪ್ರಯೋಗಾಲಯ ಶುಲ್ಕದಿಂದ ವಿನಾಯಿತಿ ಇರುತ್ತದೆ.

**ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಸೂಚನೆ**

1. ಬಿ.ಎ., ಬಿ.ಎಸ್.ಡಬ್ಲೂ., ಬಿ.ಕಾಂ., ಬಿ.ಬಿ.ಎ., ಬಿ.ಎಸ್ಸಿ., ಬಿ.ಸಿ.ಎ ಪದವಿ ತರಗತಿಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಅರ್ಜಿ ಫಾರಂಗಳನ್ನು ಕಛೇರಿಯ ವೇಳೆಯಲ್ಲಿ ಪಡೆಯುವುದು.
2. ವಿಶ್ವವಿದ್ಯಾಲಯವು ನಿಗದಿಪಡಿಸಿದ ಪ್ರವೇಶ ನೀತಿಗೆ ಒಳಪಟ್ಟು ಸರ್ಕಾರವು ರೂಪಿಸಿದ ಪ್ರವೇಶಾತಿ ನಿಯಮಗಳನ್ನು ಅನುಸರಿಸಿ ನೇರವಾಗಿ ಪ್ರವೇಶ ಮಾಡಿಕೊಳ್ಳಲಾಗುವುದು.
3. ಕಾಲೇಜಿಗೆ ಪ್ರವೇಶ ಪಡೆಯುವಾಗ ವಿದ್ಯಾರ್ಥಿಗಳು ಸರ್ಕಾರ ಮತ್ತು ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕವನ್ನು ಪಾವತಿಸುವುದರ ಜೊತೆಗೆ ಈ ಕೆಳಕಂಡ ದೃಢೀಕೃತ ನಕಲು ಪ್ರತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

   **1) ಭರ್ತಿಮಾಡಿದ ಅರ್ಜಿ ನಮೂನೆ**

   **2) ಆನ್‌ಲೈನ್ ಅರ್ಜಿಯ ಪ್ರತಿ**

   **3) ದೃಢೀಕೃತ ಎಸ್.ಎಸ್.ಎಲ್.ಸಿ. ಜೆರಾಕ್ಸ್ ಅಂಕಪಟ್ಟಿ – 1.**

   **4) ದ್ವಿತೀಯ ಪಿ.ಯು.ಸಿ. ಮೂಲ ಅಂಕಪಟ್ಟಿ ಮತ್ತು 2 ಜೆರಾಕ್ಸ್ ಪ್ರತಿಗಳು.**

5) ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು – 2 ಜೆರಾಕ್ಸ್ ಪ್ರತಿಗಳು.

6) ಮೂಲ ನಡತೆ ಪ್ರಮಾಣ ಪತ್ರ ಮತ್ತು ಜೆರಾಕ್ಸ್ ಪ್ರತಿ – 1.

7) ಮೂಲ ವರ್ಗಾವಣೆ ಪತ್ರ ಮತ್ತು 2 ಜೆರಾಕ್ಸ್ ಪ್ರತಿಗಳು

8) ಇತ್ತೀಚಿನ 5 ಭಾವಚಿತ್ರಗಳು (3 ಸ್ಟಾಂಪ್ ಸೈಜ್, 2 ಪಾಸ್‌ಪೋರ್ಟ್ ಸೈಜ್).

9) ಪ್ರವರ್ಗ –2ಎ, 2ಬಿ, 3ಎ, 3ಬಿ ಗೆ ಸೇರಿದ್ದಲ್ಲಿ ಪೋಷಕರ ಆದಾಯ ರೂ. ಒಂದು ಲಕ್ಷ ಮೀರದಿದ್ದಲ್ಲಿ ವರಮಾನ ಪ್ರಮಾಣ ಪತ್ರದ 03 ನಕಲು ಪ್ರತಿ (ಜೆರಾಕ್ಸ್) ಗಳನ್ನು ನೀಡುವುದು.

10) ಆಧಾರ್ ಕಾರ್ಡ್ ಹಾಗೂ ಬ್ಯಾಂಕ್ ಪಾಸ್ ಬುಕ್ ಜೆರಾಕ್–2 ಪ್ರತಿಗಳು

11) ಮಾಜಿ ಸೈನಿಕರ ಪ್ರಮಾಣ ಪತ್ರ–1 (ಮಾಜಿ ಸೈನಿಕರ ಮಕ್ಕಳಿಗೆ ಮಾತ್ರ)

12) ಅಂಗವಿಕಲ ಪ್ರಮಾಣ ಪತ್ರ –1 (ಅಂಗವಿಕಲ ವಿದ್ಯಾರ್ಥಿಗಳಿಗೆ ಮಾತ್ರ)

4. ಪ್ರವೇಶದ ಸಂದರ್ಭದಲ್ಲಿ ವಿದ್ಯಾರ್ಥಿ ತನ್ನ ತಂದೆ / ತಾಯಿ ಅಥವಾ ಪೋಷಕರನ್ನು ಕಾಲೇಜಿಗೆ ಕರೆತಂದು ಪ್ರವೇಶ ಸಮಿತಿಯ ಸಮಕ್ಷಮ ವಿಶ್ವವಿದ್ಯಾಲಯದ ಮುಚ್ಚಳಿಕೆ ನಮೂನೆಗೆ ಸಹಿ ಮಾಡಿಸುವುದು ಕಡ್ಡಾಯ.

5. ಪ್ರವೇಶ ಪಡೆದ ವಿದ್ಯಾರ್ಥಿಯು ಸ್ವಂತ ವಿಳಾಸದ 05 ರೂಪಾಯಿ ಅಂಚೆ ಚೀಟಿ ಲಗತ್ತಿಸಿದ 02 ಲಕೋಟೆಗಳನ್ನು ಸಲ್ಲಿಸಬೇಕು.

6. ಕಾಲೇಜಿನಲ್ಲಿ ನೀಡಿದ ಪ್ರವೇಶವನ್ನು ಅನುಮೋದಿಸುವ ಅಥವಾ ರದ್ದು ಗೊಳಿಸುವ ಅಧಿಕಾರ ಪ್ರಾಂಶುಪಾಲರು/ವಿಶ್ವವಿದ್ಯಾಲಯಕ್ಕೆ ಇರುತ್ತದೆ.

7. ಕಾಲೇಜಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಯಾವುದಾದರೊಂದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ವಿದ್ಯಾರ್ಥಿಯ ಹೆಸರಿನಲ್ಲಿ ಖಾತೆ ತೆರೆಯುವುದು ಕಡ್ಡಾಯ.

8. E-mail I.D ಕಡ್ಡಾಯವಾಗಿ ನಿಮ್ಮ ಹೆಸರಿನಲ್ಲಿ ಹೊಂದಿರಬೇಕು

**ಮೇಲಿನ ನಿಯಮ – ನಿಬಂಧನೆಗಳು ವಿಶ್ವವಿದ್ಯಾನಿಲಯದ ಅಥವಾ ಸರ್ಕಾರದ ಆದೇಶದ ಮೇರೆಗೆ ಬದಲಾವಣೆಗೆ ಒಳಪಟ್ಟಿರುತ್ತದೆ.**

## ವಿದ್ಯಾರ್ಥಿಗಳ ನಡತೆ ಹಾಗೂ ಶಿಸ್ತುಪಾಲನೆಗೆ ಸಾಮಾನ್ಯ ನಿಯಮಗಳು

1. ಕಾಲೇಜಿನ ಸಿ.ಡಿ.ಸಿ ಹಾಗೂ ಕಾಲೇಜು ಕೌನ್ಸಿಲ್ ಸಭೆಯ ತೀರ್ಮಾನದಂತೆ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯಗೊಳಿಸಲಾಗಿದೆ. (ಬುಧವಾರ ಒಂದು ದಿನ ಸಭ್ಯವಾದ ಕಲರ್ ಡ್ರೆಸ್ ಹಾಕಲು ಅವಕಾಶವಿದೆ)
2. ವಿದ್ಯಾರ್ಥಿಗಳು ಪ್ರತಿನಿತ್ಯ ತರಗತಿಗೆ ಹಾಜರಾಗತಕ್ಕದ್ದು. ಶೇ. 75ರಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ. ನಿಗದಿತ ಮಿತಿಗಿಂತ ಕಡಿಮೆ ಹಾಜರಾತಿ ಪಡೆದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.
3. ಸೆಮಿಸ್ಟರ್ ಪದ್ಧತಿಯ ನಿಯಮಗಳಂತೆ ಕಿರು ಪರೀಕ್ಷೆಗಳಿಗೆ ಹಾಗೂ ಕೌಶಲ್ಯಾಭಿವೃದ್ಧಿ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.
4. ಪ್ರತಿಯೊಬ್ಬ ವಿದ್ಯಾರ್ಥಿಯು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸಬೇಕು. ಅಧ್ಯಾಪಕರು / ಪ್ರಾಂಶುಪಾಲರು / ಕಛೇರಿ ಸಿಬ್ಬಂದಿ ಕೇಳಿದಾಗ ಗುರುತಿನ ಚೀಟಿ ತೋರಿಸಬೇಕು.
5. ಕಾಲೇಜಿನ ಆವರಣದಲ್ಲಿ ರ್‍ಯಾಗಿಂಗ್ ಹಾಗೂ ಬೇರೆ ವಿದ್ಯಾರ್ಥಿಗಳಿಗೆ ತೊಂದರೆ ಕೊಡುವುದನ್ನು ನಿಷೇಧಿಸಲಾಗಿದೆ. ಇಂತಹ ಘಟನೆ ಸಂಭವಿಸಿದರೆ ತಪ್ಪಿತಸ್ಥ ವಿದ್ಯಾರ್ಥಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.
6. ಕಾಲೇಜಿನಲ್ಲಿ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಸಹ ಶಿಕ್ಷಣ ವ್ಯವಸ್ಥೆ ಇರುವುದರಿಂದ ವಿದ್ಯಾರ್ಥಿನಿಯರೊಂದಿಗೆ ಸಭ್ಯವಾಗಿ ವರ್ತಿಸಬೇಕು.
7. ಅಧ್ಯಾಪಕರು ತರಗತಿಗೆ ಪ್ರವೇಶಿಸುವ ಮುನ್ನವೇ ವಿದ್ಯಾರ್ಥಿಗಳು ತರಗತಿಗಳಲ್ಲಿ ಹಾಜರಿರಬೇಕು. ಯಾವ ಕಾರಣಕ್ಕೂ ಕಾಲೇಜಿನ ಕಾರಿಡಾರ್‌ನಲ್ಲಾಗಲೀ, ತರಗತಿಗಳ ಕೊಠಡಿಗಳ ಮುಂದಾಗಲೀ, ಕಾಲೇಜಿನ ಆವರಣದಲ್ಲಾಗಲೀ ತಿರುಗಾಡುವುದನ್ನು ನಿಷೇಧಿಸಲಾಗಿದೆ.
8. ಕಾಲೇಜಿನ ಆಸ್ತಿ, ಕಟ್ಟಡ, ಪೀಠೋಪಕರಣ, ಲ್ಯಾಬ್ ಪರಿಕರಗಳು, ಪುಸ್ತಕಗಳನ್ನು ಹಾನಿ ಮಾಡಿದ ವಿದ್ಯಾರ್ಥಿಗಳು ನಷ್ಟವನ್ನು ಭರಿಸಬೇಕಾಗುತ್ತದೆ ಮತ್ತು ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ.
9. ನಿಯಮಗಳನ್ನು ಉಲ್ಲಂಘಿಸಿದ ಮತ್ತು ಅಶಿಸ್ತಿನಿಂದ ವರ್ತಿಸಿದ ವಿದ್ಯಾರ್ಥಿಗಳ ಮೇಲೆ ಸೂಕ್ತ ಕ್ರಮವನ್ನು ಕಾನೂನಿನ ಪ್ರಕಾರ ಕೈಗೊಳ್ಳಲಾಗುವುದು.
10. ಪ್ರತಿಯೊಂದು ಕೊಠಡಿ, ಗ್ರಂಥಾಲಯ ಮತ್ತು ಕಾಲೇಜಿನ ಆವರಣದಲ್ಲಿ ಸಿ.ಸಿ. ಟಿವಿ ಕಣ್ಗಾವಲು ಇರುತ್ತದೆ.

# ಕಾಲೇಜಿನಲ್ಲಿ ದೊರೆಯುವ ಸೌಲಭ್ಯಗಳು

**1. ಗ್ರಂಥಾಲಯ :** ಗ್ರಂಥಾಲಯವು ಶೈಕ್ಷಣಿಕ ಸಂಸ್ಥೆಯ ಪ್ರಧಾನವಾದ ಅಂಗ. ಒಂದು ಕಾಲೇಜಿನ ಸದೃಢತೆಯನ್ನು ಅದರ ಗ್ರಂಥಾಲಯದ ಮೂಲಕ ತಿಳಿಯಬಹುದು. ಹಾಗೆಯೇ ನಮ್ಮ ಕಾಲೇಜಿನ ಗ್ರಂಥಾಲಯದಲ್ಲಿ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತಹ ವೈವಿಧ್ಯಮಯ, ವಿಶಿಷ್ಟವಾದ ಅಪರೂಪದ ಪುಸ್ತಕಗಳಿವೆ. ಎಲ್ಲಾ ವಿಷಯಗಳಿಗೆ ಸೇರಿದ ಸುಮಾರು 38,000 ಪುಸ್ತಕಗಳು ವಿದ್ಯಾರ್ಥಿಗಳಿಗೆ ಲಭ್ಯವಿದೆ. ಈ ಪುಸ್ತಕಗಳನ್ನು ನಿಯಮಾವಳಿಗೆ ಒಳಪಟ್ಟು ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.

ವಾಚನಾಲಯ ಸೌಲಭ್ಯವಿದ್ದು, ಅಲ್ಲಿ ದಿನಪತ್ರಿಕೆ, ವಾರಪತ್ರಿಕೆ, ನಿಯತ ಕಾಲಿಕೆಗಳು, ಸ್ಪರ್ಧಾತ್ಮಕ ಪರೀಕ್ಷೆಯ ಸಂಚಿಕೆಗಳು, ಮಾಹಿತಿ ಪತ್ರಗಳು, ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿದ್ದು, ಎಲ್ಲರೂ ಕೂತು ಓದುವ ವ್ಯವಸ್ಥೆ ಇರುತ್ತದೆ. ಪರಾಮರ್ಶನ ಗ್ರಂಥಗಳ ವಿಭಾಗವಿದ್ದು ಅಗತ್ಯ ಆಕರ ಗ್ರಂಥಗಳು, ವರದಿಗಳು, ಅಟ್ಲಾಸ್‌ಗಳು, ಚಾರ್ಟ್‌ಗಳು ಮತ್ತು ಛಾಯಾಚಿತ್ರಗಳು ಪರಾಮರ್ಶನಕ್ಕೆ ಲಭ್ಯವಿರುತ್ತವೆ.

N-List facility and Network Resource Centre ಹೊಂದಿದೆ

**2. ಕ್ರೀಡಾ ವಿಭಾಗ :** ಕಾಲೇಜಿನಲ್ಲಿ ಅನುಭವಿ ದೈಹಿಕ ಶಿಕ್ಷಣ ಬೋಧಕರ ಮಾರ್ಗದರ್ಶನದಲ್ಲಿ ಪೂರ್ಣ ಪ್ರಮಾಣದ ಕ್ರೀಡಾ ವಿಭಾಗವಿದ್ದು ಕ್ರೀಡೆಯಲ್ಲಿ ಆಸಕ್ತ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸೂಕ್ತ ತರಬೇತಿ ನೀಡಿ ಅಂತರ್ ಕಾಲೇಜು ಮತ್ತು ಅಂತರ್ ವಿಶ್ವವಿದ್ಯಾನಿಲಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ವ್ಯವಸ್ಥೆ ಮಾಡಲಾಗುವುದು. ಈ ವಿಭಾಗದಲ್ಲಿ ಒಳಾಂಗಣ ಮತ್ತು ಹೊರಾಂಗಣ ಎರಡೂ ಚಟುವಟಿಕೆಗಳಿಗೆ ಅವಕಾಶವಿದ್ದು, ವಿದ್ಯಾರ್ಥಿಗಳು ಅವುಗಳ ಸದುಪಯೋಗ ಪಡೆದುಕೊಳ್ಳ ಬಹುದಾಗಿದೆ. ಕಾಲಕಾಲಕ್ಕೆ ಈ ವಿಭಾಗವು ವಿಶ್ವವಿದ್ಯಾಲಯ ಅಂತರ್‌ಕಾಲೇಜು ಪಂದ್ಯಾವಳಿ ಮತ್ತು ಆಯ್ಕೆಯನ್ನು ನಡೆಸುತ್ತಾ ಬರುತ್ತಿ ದೆ.

**3. ಸಾಂಸ್ಕೃತಿಕ ವೇದಿಕೆ :** ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ, ಅವುಗಳನ್ನು ಅಭಿವ್ಯಕ್ತಿಗೊಳಿಸಲು ಪ್ರತಿಭಾನ್ವೇಷಣೆ ಕಾರ್ಯಕ್ರಮಗಳನ್ನು ನಡೆಸಲಾಗುವುದು, ಅನುಭವಿ ಉಪನ್ಯಾಸಕರ ಮಾರ್ಗದರ್ಶನದಲ್ಲಿ ನಡೆಯುವ ಸಾಂಸ್ಕೃತಿಕ ವೇದಿಕೆ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಬೆಳೆಸುವ ಕಾರ್ಯವನ್ನು ಮಾಡುತ್ತಾ ಬಂದಿದೆ. ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ಹಾಗೂ ಅಂತರ್ ವಿಶ್ವವಿದ್ಯಾಲಯ ಮಟ್ಟದ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶವಿದೆ. ಸಾಂಸ್ಕೃತಿಕ ವೇದಿಕೆಗೆ ಪೂರಕವಾಗಿ, ಸಾಹಿತ್ಯ ವೇದಿಕೆ ಹಾಗೂ ವಿವಿಧ ವಿಭಾಗಗಳ ವೇದಿಕೆಗಳು ಕೂಡ ಕ್ರಿಯಾಶೀಲವಾಗಿರುವುದು ವಿದ್ಯಾರ್ಥಿಗಳ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಸಹಾಯಕವಾಗಿದೆ.

**4. ರಾಷ್ಟ್ರೀಯ ಸೇವಾ ಯೋಜನೆ, ರೋವರ್ಸ್ ಮತ್ತು ರೇಂಜರ್ಸ್, ಯುವ ರೆಡ್ ಕ್ರಾಸ್ ಘಟಕ ಮತ್ತು ರೆಡ್ ರಿಬ್ಬನ್ ಹಾಗೂ ಎನ್.ಸಿ.ಸಿ. ಘಟಕಗಳು :** ನಮ್ಮ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು, ಯುವ ರೆಡ್ ಕ್ರಾಸ್ ಮತ್ತು ರೆಡ್ ರಿಬ್ಬನ್, ಎನ್.ಸಿ.ಸಿ. ಘಟಕ ಹಾಗೂ ರೋವರ್ಸ್ ರೇಂಜರ್ಸ್ ಘಟಕಗಳಿದ್ದು ಇವುಗಳು ಸಮರ್ಥ ಉಪನ್ಯಾಸಕರಿಂದ ನಿರ್ವಹಿಸಲ್ಪಡುತ್ತಿವೆ. ಆಸಕ್ತ ವಿದ್ಯಾರ್ಥಿಗಳು ಇವುಗಳಲ್ಲಿ ನೋಂದಾಯಿಸಿಕೊಂಡು ಶಿಸ್ತು, ನಾಯಕತ್ವ, ಭಾವೈಕ್ಯತೆ, ಸೇವಾ ಮನೋಭಾವ ಬೆಳೆಸಿಕೊಳ್ಳಬಹುದು.

**5. ಜ್ಞಾನ ಸಂಗಮ ಮತ್ತು ಎಲ್.ಎಂ.ಎಸ್ ಸೌಲಭ್ಯ :** ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಮನೋವಿಕಾಸಕ್ಕೆ ಸಂಬಂಧಿಸಿದಂತೆ ಕಾಲೇಜಿನಲ್ಲಿ ಡಿಜಿಟಲ್ ಕೊಠಡಿಗಳಿದ್ದು ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ Wi-Fi, KIOSK (ಇದರಲ್ಲಿ ಸುಮಾರು 150 ವಿಷಯಗಳ ಪಠ್ಯಮಾಹಿತಿ ದೊರೆಯುತ್ತದೆ) ಸೌಲಭ್ಯವಿರುತ್ತದೆ. ಎಲ್.ಎಂ.ಎಸ್. ನಲ್ಲಿ ಎಲ್ಲಾ ವಿಷಯಗಳ ಪಠ್ಯಗಳನ್ನು ವಿಡಿಯೋ, ಪಿ.ಪಿ.ಟಿ, ಸ್ಟಡೀ ಮೆಟೀರಿಯಲ್ಸ್, ಮತ್ತು ಎಂ.ಸಿ.ಕ್ಯೂ ನೀಡಲಾಗಿರುತ್ತದೆ. ಅವುಗಳನ್ನು ಕೂಡ ವಿದ್ಯಾರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದು.

**6. ಉದ್ಯೋಗ ಭರವಸಾ ಕೋಶ :** ಕಾಲೇಜಿನಲ್ಲಿ Placement Cell ವಿಭಾಗವಿದ್ದು ಅದರ ಅಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರದ ಅನೇಕ ಕಂಪನಿಗಳು ಹಾಗೂ ಇಲಾಖೆಗಳಲ್ಲಿ ತರಬೇತಿ ಮತ್ತು ಉದ್ಯೋಗ ಪಡೆಯಲು ಅವಕಾಶ ಮಾಡಿಕೊಡಲಾಗುತ್ತದೆ.

**7. ವಿದ್ಯಾರ್ಥಿ ವೇತನಗಳು :** ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಸರ್ಕಾರ/ ಖಾಸಗೀ ಕಂಪನಿಗಳಿಂದ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದ್ದು, ಮಾಹಿತಿಯನ್ನು ಕಾಲಕಾಲಕ್ಕೆ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ವಿದ್ಯಾರ್ಥಿವೇತನ ಪಡೆಯಲು ಉತ್ತಮ ಅಂಕ, ನಡತೆ, ಹಾಜರಾತಿ ಇತ್ಯಾದಿಗಳನ್ನು ಆಧರಿಸಿ, ಸರ್ಕಾರದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಇದರ ಸದುಪಯೋಗ ಪಡೆದುಕೊಳ್ಳಲು ಅವಕಾಶವಿದೆ. ವಿದ್ಯಾರ್ಥಿ ವೇತನಗಳ ವಿವರ ಕೆಳಗಿನಂತಿವೆ.

- ಸಮಾಜ ಕಲ್ಯಾಣ ಇಲಾಖೆಯಿಂದ (ಪ.ಜಾ. / ಪ.ಪಂ.)
- ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರಿಗೆ (ಬಿ.ಸಿ.ಎಂ.)
- ಸಂಚಿ ಹೊನ್ನಮ್ಮ ವಿದ್ಯಾರ್ಥಿ ವೇತನ (ವಿದ್ಯಾರ್ಥಿನಿಯರಿಗೆ)
- ಬಡ ವಿದ್ಯಾರ್ಥಿ ನಿಧಿ
- ಜಿಂದಾಲ್ ವಿದ್ಯಾರ್ಥಿ ವೇತನ.
- ಸರ್. ಸಿ. ವಿ. ರಾಮನ್ ವಿದ್ಯಾರ್ಥಿ ವೇತನ (ವಿಜ್ಞಾನ ವಿದ್ಯಾರ್ಥಿಗಳಿಗೆ ಮಾತ್ರ)
- ಮೆರಿಟ್ (ಕ್ರೀಡಾ) ವಿದ್ಯಾರ್ಥಿವೇತನ (ವಿಶ್ವವಿದ್ಯಾನಿಯಲದಿಂದ)
- ಮಾಜಿ ಸೈನಿಕರ ಮಕ್ಕಳಿಗೆ ವಿದ್ಯಾರ್ಥಿವೇತನ.
- ವಿಕಲ ಚೇತನ ವಿದ್ಯಾರ್ಥಿವೇತನ.
- ಯು.ಜಿ.ಸಿ. ವಿದ್ಯಾರ್ಥಿವೇತನ.
- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವಿದ್ಯಾರ್ಥಿ ವೇತನ.
- ರಾಜೀವ್ ಗಾಂಧಿ ವಿದ್ಯಾರ್ಥಿ ಸಾಲ ಯೋಜನೆ.

**8. ವಿದ್ಯಾರ್ಥಿಗಳ ಆಪ್ತಸಲಹಾ ಕೋಶ :** ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಆಪ್ತಸಲಹಾ ಕೋಶವಿದ್ದು, ವೈಯಕ್ತಿಕ ಸಮಸ್ಯೆ, ಕೀಳರಿಮೆ, ಸಂಕುಚಿತ ಮನೋಭಾವಗಳಿಂದ ಖಿನ್ನತೆಗೆ ಒಳಗಾದ ವಿದ್ಯಾರ್ಥಿಗಳಿಗೆ ನಿಮಾನ್ಸ್‌ನಲ್ಲಿ ತರಬೇತಿ ಪಡೆದ ಅನುಭವಿ ಅಧ್ಯಾಪಕರಿಂದ ಆಪ್ತಸಲಹೆಗಳನ್ನು ನೀಡಿ ಅವರ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸುವುದು, ಸಾಧ್ಯವಾದಷ್ಟು ಪರಿಹಾರ ದೊರಕಿಸಿ ಕೊಡಲು ಪ್ರಯತ್ನಿಸಲಾಗುವುದು.

**9. ಗಣಕಯಂತ್ರದ ಪ್ರಯೋಗಾಲಯ ಸೇವೆ :** ಕಾಲೇಜಿನಲ್ಲಿ ಸುಸಜ್ಜಿತವಾದ ಹವಾನಿಯಂತ್ರಿತ ಗಣಕಯಂತ್ರದ ಪ್ರಯೋಗಾಲಯವಿದ್ದು. ಉತ್ತಮವಾದ ಪ್ರಾಯೋಗಿಕ ತರಬೇತಿಯನ್ನು ವಿದ್ಯಾರ್ಥಿಗಳಿಗೆ ನೀಡುತ್ತಿದೆ.

**10. ಮೇಲಿನ ಎಲ್ಲಾ ಸಮಿತಿಗಳ ಮತ್ತು ಸೇವೆಗಳ ಹೊರತಾಗಿಯೂ ಕಾಲೇಜಿನಲ್ಲಿ ಇನ್ನೂ ಬೇರೆ ಬೇರೆ ಸಮಿತಿಗಳ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ ಅವುಗಳೆಂದರೆ :** ಮೈತ್ರಿ ಸಹಾಯವಾಣಿ, ಆ್ಯಂಟಿರ್‍ಯಾಗಿಂಗ್ ಸಮಿತಿ, ಲೈಂಗಿಕ ದೌರ್ಜನ್ಯತಡೆ ಸಮಿತಿ, ಆಂತರಿಕ ದೂರು ಸಮಿತಿ, ಕುಂದು ಕೊರತೆ ನಿವಾರಣಾ ಸಮಿತಿ, ಮಾನವ ಹಕ್ಕುಗಳ ಸಮಿತಿ, ಎಲೆಕ್ಟ್ರೋ ಲಿಟ್ರಸಿ ಕ್ಲಬ್, ಅಲ್ಪಸಂಖ್ಯಾತರ ಕೋಶ, ಹಿಂದುಳಿದ ವರ್ಗಗಳ ಕೋಶ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಕೋಶ, ಹಿರಿಯ ವಿದ್ಯಾರ್ಥಿಗಳ ಸಂಘ, ಮಹಿಳಾ ಸಬಲೀಕರಣ ಕೋಶ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಸಮಿತಿ, ಪೋಷಕ–ಶಿಕ್ಷಕ ಸಮಿತಿ, ಸಂಶೋಧನಾ ಸಮಿತಿ, ಶಿಸ್ತುಪಾಲನ ಸಮಿತಿ, ಪರೀಕ್ಷಾ ಸಮಿತಿ, ಹೆರಿಟೇಜ್ ಕ್ಲಬ್, ಇನ್ನೋವೇಷನ್ ಕ್ಲಬ್ ಗ್ರೀನ್ ಕ್ಲಬ್, ಸ್ಟಡೀ ಸೆಂಟರ್ ಮುಂತಾದವು.

**●ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 08129–222217,**

**ಕಲಾ ವಿಭಾಗ :– ಡಾ.ಅಜಯ್ ಕುಮಾರ : – 8861436914**

**ವಿಜ್ಞಾನ ವಿಭಾಗ :– ಗೋಪಾಲ್ ಬಿ :– 9480492864**

**ವಾಣಿಜ್ಯ ವಿಭಾಗ :– ರೋಹಿಣಿ ಆರ್. : – 9916239974**

**ವೀರನಗೌಡ :– 9448922384**

राष्ट्रीय मूल्यांकन एवं प्रत्यायन परिषद

विश्वविद्यालय अनुदान आयोग का स्वायत्त संस्थान

**NATIONAL ASSESSMENT AND ACCREDITATION COUNCIL**

*An Autonomous Institution of the University Grants Commission*

# Certificate of Accreditation

The Executive Committee of the

National Assessment and Accreditation Council

is pleased to declare the

Government First Grade College, Shikaripura

Shikaripura, Dist. Shivamogga, affiliated to Kuvempu University, Karnataka as

## Accredited

with CGPA of 2.92 on four point scale

at B++ grade

valid up to February 14, 2027

Date : February 15, 2022

Director

EC(SC)/93/3rd Cycle/KACOGN11763


NAAC


Department of Collegiate Education
Government First Grade College


Department of Collegiate Education
Government First Grade College